

# ನಾನು ಜಡಪಂಥೀಯ ಅಲ್ಲ, ಸದಾ ಜನಪಂಥೀಯ

## ಲೇಖಕ ಬರಗೂರು ರಾಮಚಂದ್ರಪ್ಪ ಅವರೊಂದಿಗೆ ಒಂದು ಸಂವಾದ

ಸಂದರ್ಶನ: **ವಿಕ್ರಂ ವಿಸಾಜಿ**

ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.

ಬರಗೂರು ರಾಮಚಂದ್ರಪ್ಪ (1947) ಕನ್ನಡದ ಪ್ರಸಿದ್ಧ ಬರಹಗಾರ ಮತ್ತು ವಿಚಾರವಾದಿ. ತಮ್ಮ ಸಮಾಜಪರ, ಜೀವಪರ ವೈಚಾರಿಕ ನಿಲುವುಗಳಿಂದ ಕನ್ನಡಿಗರಿಗೆ ಚಿರಪರಿಚಿತರು. ಬಂಡಾಯ ಸಾಹಿತ್ಯ ಸಂಘಟನೆಯ ಮೂಲಕ ಹೊಸ ಆಶಯಗಳ ಅಭಿವ್ಯಕ್ತಿಗೆ ಕಾರಣರಾದವರಲ್ಲಿ ಒಬ್ಬರು. ಕನ್ನಡ, ಕರ್ನಾಟಕದ ಬಿಕ್ಕಟ್ಟಿನ ಹಲವು ಸಂದರ್ಭಗಳಲ್ಲಿ ನೈತಿಕವಾಗಿ ಸ್ಪಂದಿಸಿದವರು. ಕನ್ನಡದ ಕೃತಿಗಳು ಬಹಿಷ್ಕಾರಕ್ಕೊಳಗಾದಾಗ ಏಕಾಂಗಿಯಾಗಿ ಕೋರ್ಟಿನ ಮೆಟ್ಟಿಲೇರಿದವರು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗಿದಾಗ ಅದರ ವಿರುದ್ಧ ಅವರದೊಂದು ದನಿ ಸದಾ ಇದ್ದೇ ಇರುತ್ತದೆ. ತಮ್ಮ ಕಾವ್ಯ, ಕತೆ, ಕಾದಂಬರಿ, ವಿಮರ್ಶೆ, ವೈಚಾರಿಕ ಲೇಖನಗಳ ಮೂಲಕ ಹೊಸ ಅಲೆಯ ಬರಹಗಳಿಗೆ ಕಾರಣರಾದರು. ಅವರ ಭಾಷಣದ ಮೋಡಿಗೆ ಒಳಗಾಗದೆ ಇರುವವರು ಅಪರೂಪ. ಸಿನಿಮಾ ಕೂಡ ಅವರ ಅಭಿವ್ಯಕ್ತಿಯ ಕ್ಷೇತ್ರ. ಅಲ್ಲೂ ಮಹತ್ವದ ಪ್ರಯೋಗಗಳನ್ನು ಅವರು ಮಾಡಿದ್ದಾರೆ. ತಮ್ಮ ಸಿನಿಮಾಗಳ ಮೂಲಕ ಕನ್ನಡ ನಾಡಿನ ಹೊರಗೂ ಜನರ ಗಮನವನ್ನು ಸೆಳೆದಿದ್ದಾರೆ. ಚಳವಳಿ ಅವರ ಸಂಗಾತಿ. ಹೊಸ ತಲೆಮಾರಿನ ಬರಹಗಾರರನ್ನು ರೂಪಿಸುವುದು ಒಂದು ಜವಾಬ್ದಾರಿಯೆಂದು ಭಾವಿಸಿದವರು. ಇವತ್ತಿಗೂ ತಮ್ಮ ಬರವಣಿಗೆ, ಸಿನಿಮಾ ಹಾಗೂ ಬಂಡಾಯ ಸಾಹಿತ್ಯ ಸಂಘಟನೆಯ ಮೂಲಕ ಕ್ರಿಯಾಶೀಲರಾಗಿದ್ದಾರೆ. ಕನ್ನಡ ಸಾಂಸ್ಕೃತಿಕ ಲೋಕದ ಬಹುಮುಖ್ಯವಾದ ಮತ್ತು ಎಲ್ಲ ಕಾಲಕ್ಕೂ ಬೇಕಾದ ದನಿ ಬರಗೂರರದು. ಅವರೊಂದಿಗೆ ನಡೆಸಿದ ಸಂವಾದವನ್ನು ಮುಂದೆ ಕೊಡಲಾಗಿದೆ.